'ನಾನು, ನನ್ನದು' ಎಂಬ ಮೋಹ ಕುಟುಂಬವನ್ನು ಅಶಾಂತಿಗೆ ತಳ್ಳುತ್ತದೆ. ಯಾರು ತನ್ನವರೋ ಅವರು ಯಾವಾಗಲೂ ತನ್ನ ಇಚ್ಛೆಯಂತೇ ನಡೆಯಬೇಕೆಂಬ ಭಾವನೆ ಬಹುತೇಕ ಜನಕ್ಕೆ ಸ್ವಾಭಾವಿಕವಾಗಿಯೇ ಇರುತ್ತದೆ. ಇದು ಆ ವ್ಯಕ್ತಿಯ ಸ್ವಾತಂತ್ರ್ಯವನ್ನು ಕಸಿದುಕೊಳ್ಳುತ್ತದೆ ಎಂಬುದನ್ನು ಮರೆತು, ಮೋಹವನ್ನು ಬೆಳೆಸಿಕೊಳ್ಳುತ್ತೇವೆ. ಗೀತೆ ಈ ಬಗೆಯ ಆಸಕ್ತಿಯ ವಶದಿಂದ ಮುಕ್ತರಾಗುವಂತೆ ಮತ್ತೆ ಮತ್ತೆ ನಮಗೆ ತಿಳಿವಳಿಕೆ ಹೇಳುತ್ತದೆ. **ರಾಗದ್ವೇಷವಿಯುಕ್ತೈಸ್ತು ವಿಷಯಾನಿಂದ್ರಿಯೈಶ್ಚರನ್। ಆತ್ಮವಶ್ಯೈರ್ವಿಧೇಯಾತ್ಮಾ ಪ್ರಸಾದಮಧಿಗಚ್ಛತಿ॥** (*ಗೀತೆ, ೨:೬೪*) – "ಪ್ರಿಯವಾದುದರಲ್ಲಿ ಆಸಕ್ತಿ, ಅಪ್ರಿಯವಾದುದರಲ್ಲಿ ದ್ವೇಷ – ಇವುಗಳಿಂದ ಬಿಡುಗಡೆಯನ್ನು ಹೊಂದಿರುವ ಸಂಯಮಚಿತ್ತನಾದ ವ್ಯಕ್ತಿಯು ಮನಸ್ಸಿನಲ್ಲಿ ಶಾಂತಿಯನ್ನು ಪಡೆಯುತ್ತಾನೆ." ಶ್ರೀರಾಮಕೃಷ್ಣರು ಶ್ರೀಮಂತನ ಮನೆಯ ಕೆಲಸದವಳಂತೆ ಸಂಸಾರದ ಕೆಲಸಗಳನ್ನು ನಿರ್ವಹಿಸಲು ಹೇಳುತ್ತಾರೆ. ಆಕೆ ಪ್ರೀತಿಯಿಂದ ಮನೆಯ ಎಲ್ಲರ ಸೇವೆ ಹಾಗೂ ಕೆಲಸಗಳನ್ನು ಮಾಡಿಕೊಂಡು ಹೋಗುತ್ತಿರುತ್ತಾಳೆ. ಆದರೂ ಆಕೆಯ ಮನಸ್ಸು ಮಾತ್ರ ಹಳ್ಳಿಯಲ್ಲಿರುವ ತನ್ನ ಮನೆಯತ್ತಲೇ ಇರುತ್ತದೆ. ಮನುಷ್ಯಜೀವನ ಅನಿತ್ಯ, ಇದೆಲ್ಲಾ ಎರಡು ದಿನದ್ದು ಎಂಬ ವಾಸ್ತವ ಸತ್ಯವನ್ನು ಒಪ್ಪಿಕೊಂಡು ನಿರಾಸಕ್ತ ಭಾವನೆಯಿಂದ ಇರಲು ಪ್ರಯತ್ನಿಸಿದರೆ ಮಾತ್ರವೇ ಈ ಮೋಹ ಹಾಗೂ ಅದರಿಂದ ಉಂಟಾಗುವ ಕಷ್ಟಗಳಿಂದ ಮುಕ್ತವಾಗಲು ಸಾಧ್ಯ. ಆಗ ಮನಸ್ಸಿಗೆ ಕಷ್ಟ ಬಂದರೂ ಅದು ಹೆಚ್ಚುಕಾಲ ನಿಲ್ಲದು. ಬೇಗ ನಿರ್ಲಿಪ್ತಸ್ಥಿತಿ ಮರುಕಳಿಸಿ, ಮನಸ್ಸು ಶಾಂತವಾಗುತ್ತದೆ.

ಶ್ರೀಮಾತೆ, "ಸಂತೋಷಕ್ಕಿಂತ ಅಮೂಲ್ಯವಾದ ಸಂಪತ್ತು ಇನ್ನೊಂದಿಲ್ಲ" ಎಂದು ಹೇಳುತ್ತಾರೆ. ಈ ಸಂಪತ್ತನ್ನು ಪಡೆಯಬೇಕಿದ್ದರೆ ಸಮತೋಲನದ ಜೀವನ ನಡೆಸುವ ಪ್ರಯತ್ನವನ್ನು ಮಾಡಬೇಕು. ಯಾವುದನ್ನೇ ಆಗಲಿ, ವಿಪರೀತವಾಗಿ ಮಾಡಿದರೆ, ಅದು ತನಗೂ ಹಾಗೂ ತನ್ನೊಡನೆ ಬದುಕುತ್ತಿರುವ ಇತರರಿಗೂ ಕಷ್ಟವನ್ನು ಉಂಟುಮಾಡುತ್ತದೆ. ಅದಕ್ಕೆಂದೇ ಗೀತೆಯಲ್ಲಿ, **"ಸಮತ್ವಂ ಯೋಗ ಉಚ್ಯತೇ"** – ಶಾಂತವಾದ, ಸಮತೋಲನದಲ್ಲಿರುವ ಮನಸ್ಸಿನ ಅವಸ್ಥೆಗೆ ಯೋಗ ಎನ್ನಲಾಗಿದೆ. **ಯುಕ್ತಾಹಾರವಿಹಾರಸ್ಯ ಯುಕ್ತಚೇಷ್ಟಸ್ಯ ಕರ್ಮಸು। ಯುಕ್ತಸ್ವಪ್ನಾವಬೋಧಸ್ಯ ಯೋಗೋ ಭವತಿ ದುಃಖಹಾ॥** (*ಗೀತೆ, ೬:೧೭*) – "ಆಹಾರವಿಹಾರಗಳಲ್ಲಿ, ಮಾಡುವ ಕೆಲಸಗಳಲ್ಲಿ, ನಿದ್ರೆ, ಎಚ್ಚರಿಕೆಯ ಸ್ಥಿತಿ– ಪ್ರತಿಯೊಂದರಲ್ಲೂ ಯಾವುದೇ ರೀತಿಯ ಅತಿರೇಕ ಇರಬಾರದು."

ಹಿಡಿತದಲ್ಲಿಟ್ಟುಕೊಳ್ಳಬೇಕಾದ ಮತ್ತೊಂದು ಮುಖ್ಯ ಅಂಶವೆಂದರೆ ನಮ್ಮ ಮಾತುಕತೆಗಳು. ನಮ್ಮ ಮಾತುಗಳಿಂದ ಇತರರು ಶಾಂತಿ ನೆಮ್ಮದಿಯನ್ನು ಪಡೆಯಬಲ್ಲರು. ಹಾಗೆಯೇ ಕಟುವಾದ ಮಾತುಗಳು ಚೂರಿಯಲ್ಲಿ ಇರಿದು ಮಾಡಿದ ಗಾಯಕ್ಕಿಂತ ಹೆಚ್ಚು ಕಷ್ಟವನ್ನು ಕೊಡಬಲ್ಲವು. ಒಂದು ಸಣ್ಣ ಮಾತಿನ ಏರುಪೇರಿನಿಂದ ನಿಮಿಷದಲ್ಲಿ ಶಾಂತಿ ಮಾಯವಾಗುತ್ತದೆ. **ಅನುದ್ವೇಗಕರಂ ವಾಕ್ಯಂ ಸತ್ಯಂ ಪ್ರಿಯಹಿತಂ ಚ ಯತ್...** (*ಗೀತೆ, ೧೭:೧೫*). ಈ ಪುಟ್ಟ ವಾಕ್ಯದಲ್ಲಿ ಗೀತೆ ಒಂದು ಗುರುತರವಾದ ಪಾಠವನ್ನು ನಮಗೆ ಕಲಿಸುತ್ತದೆ. ಮತ್ತೊಬ್ಬರಿಗೆ ಹಿತವಾಗಿಯೂ ಪ್ರಿಯವಾಗಿಯೂ ಇರುವ, ಸತ್ಯವಾದ ಮಾತುಗಳನ್ನೇ ನಾವು ಆಡಬೇಕು. ಅನೇಕರಿಗೆ ತಾವು ಏನು ಮಾತನಾಡುತ್ತಿದ್ದೇವೆ ಎಂಬ ಅರಿವೂ ಇರುವುದಿಲ್ಲ. ಅಂಥವರೊಂದಿಗೆ ಎರಡು ನಿಮಿಷವಿರುವುದೂ ಅಸಹನೀಯ ಎನ್ನಿಸಿಬಿಡುತ್ತದೆ. ಪ್ರತಿಯೊಬ್ಬರೂ ತಮ್ಮ ಮಾತಿನ ಬಗ್ಗೆ ಜಾಗೃತರಾಗಿರಬೇಕು. ಈ ರೀತಿ ನಮ್ಮ ಮಾತುಗಳನ್ನು ಸತ್ಯ, ಪ್ರಿಯ, ಹಿತವಾಗಿ ಮಾಡುವ ಪ್ರಯತ್ನವನ್ನು ಗೀತೆ 'ವಾಚಿಕ ತಪಸ್ಸು' ಎಂದು ಕರೆಯುತ್ತದೆ.

ನಮ್ಮ ಕುಟುಂಬಕ್ಕೆ ಅಥವಾ ನಾವಿರುವ ಸಮಾಜಕ್ಕೆ ನಾವು ಸಲ್ಲಿಸಬಹುದಾದ ಬಹು ದೊಡ್ಡ ಸೇವೆ ಎಂದರೆ ಇತರರಿಗೆ ತೊಂದರೆ ಕೊಡದಂತೆ ಬದುಕುವುದು. **ಯಸ್ಮಾನ್ನೋದ್ವಿಜತೇ ಲೋಕೋ ಲೋಕಾನ್ನೋದ್ವಿಜತೇ ಚ ಯಃ। ಹರ್ಷಾಮರ್ಷ ಭಯೋದ್ವೇಗೈರ್ಮುಕ್ತೋ ಯಃ ಸ ಚ ಮೇ ಪ್ರಿಯಃ॥** (*ಗೀತೆ, ೧೨.೧೫*) – "ಯಾವ ವ್ಯಕ್ತಿಯು ತಾನೂ ಉದ್ವೇಗಕ್ಕೆ ಒಳಗಾಗದೆ, ಇತರರಿಗೂ ಉದ್ವೇಗವನ್ನುಂಟುಮಾಡದೆ, ಅಸಹನೆ, ಭಯ ಇವುಗಳಿಂದ ಮುಕ್ತನಾಗಿ ಬದುಕುತ್ತಿರುವನೋ ಅಂಥವನು ಭಗವಂತನಿಗೆ ಪ್ರಿಯನಾದವನು" ಎನ್ನುತ್ತದೆ ಗೀತಾ.

**ಅದ್ವೇಷ್ಟಾ ಸರ್ವಭೂತಾನಾಂ ಮೈತ್ರಃ ಕರುಣ ಏವ ಚ । ನಿರ್ಮಮೋ ನಿರಹಂಕಾರಃ ಸಮದುಃಖಸುಖಃ ಕ್ಷಮೀ॥** (*ಗೀತೆ, ೧೨:೧೩*) –ಅನಾಸಕ್ತನಾದ ವ್ಯಕ್ತಿಯು ಒಂದು ಕಲ್ಲಿನ ತುಂಡಿನಂತೆ ಕಠಿಣವಾಗಿ ಇರುವುದಿಲ್ಲ. ಆತನಿಗೆ ಎಲ್ಲರಲ್ಲಿಯೂ ಸ್ನೇಹ, ಕರುಣೆಗಳೇ ಪ್ರಧಾನವಾಗಿರುತ್ತವೆ. ಜೊತೆಗೆ ಆತ ಕ್ಷಮಾಶೀಲನೂ ಆಗಿರುತ್ತಾನೆ. ಮತ್ತೊಬ್ಬರ ತಪ್ಪುಗಳನ್ನು ಉದಾರಭಾವದಿಂದ ಕ್ಷಮಿಸುವುದು ಒಂದು ಅಪೂರ್ವ ಗುಣ. "ಎಲ್ಲರನ್ನೂ ಪ್ರೀತಿಸಬೇಕು, ಯಾರೂ ನಮಗೆ ಪರರಲ್ಲ" ಎನ್ನುವುದಕ್ಕೆ ಶ್ರೀರಾಮಕೃಷ್ಣರು ಪ್ರಹ್ಲಾದನ ಕಥೆಯನ್ನು ಉದಾಹರಣೆಯಾಗಿ ಹೇಳುತ್ತಿದ್ದರು. ಪ್ರಹ್ಲಾದನಿಗೆ

ದೇವರು, "ಒಂದು ವರವನ್ನು ಕೇಳು" ಎನ್ನುತ್ತಾನೆ. ಪ್ರಹ್ಲಾದನು, "ವರ ಕೊಡಲೇಬೇಕು ಎಂದಾದರೆ, ನನಗೆ ಈ ವರವನ್ನು ಕೊಡಿ: ಯಾರು ನನಗೆ ಕಷ್ಟವನ್ನು ಕೊಟ್ಟಿರುವರೋ ಅವರಿಗೆ ಮಂಗಳವಾಗಲಿ" ಎಂದು ಹೇಳುತ್ತಾನೆ. ಇಂತಹ ಭಾವದಲ್ಲಿರುವುದು ನಮಗೂ ಸಾಧ್ಯವಾದರೆ, ನಮ್ಮ ಜೀವನ ಧನ್ಯವಾಗುತ್ತದೆ.

ಈ ಎಲ್ಲ ಗುಣಗಳೂ ನಮ್ಮ ಬದುಕನ್ನು ಶ್ರೀಮಂತಗೊಳಿಸುತ್ತವೆ; ಶಾಂತಿ, ತೃಪ್ತಿಗಳನ್ನು ಕೊಡುತ್ತವೆ ಎಂಬುದೇನೋ ನಿಜ. ಆದರೂ ಈ ಅರಿವು ನಮ್ಮಲ್ಲಿ ಏಕೆ ಜಾಗೃತವಾಗುತ್ತಿಲ್ಲ? ಆ ದಿಕ್ಕಿನಲ್ಲಿ ಪ್ರಯತ್ನಿಸಲೂ ನಮಗೆ ಇಚ್ಛೆಯಾಗುತ್ತಿಲ್ಲವೇಕೆ? ಅದಕ್ಕೆ ಕಾರಣವನ್ನು ಭಗವದ್ಗೀತೆ ಹೀಗೆ ಕೊಡುತ್ತದೆ:

**ಕಾಮ ಏಷ ಕ್ರೋಧ ಏಷ ರಜೋಗುಣಸಮುದ್ಭವಃ** (*ಗೀತೆ,* ೩:೩೭), **ಆವೃತಂ ಜ್ಞಾನಮೇತೇನ ಜ್ಞಾನಿನೋ ನಿತ್ಯವೈರಿಣಾ। ಕಾಮರೂಪೇಣ ಕೌಂತೇಯ ದುಷ್ಪೂರೇಣಾನಲೇನ ಚ ॥** (*ಗೀತೆ,* ೩:೩೯)

ನಮ್ಮೊಳಗೆ ಅಂತರ್ಗತವಾಗಿರುವ ಜ್ಞಾನವು ಕಾಮಕ್ರೋಧಾದಿಗಳಿಂದ ಮುಚ್ಚಿಹೋಗಿದೆ. ಈ ಆವರಣವನ್ನು ಸರಿಸಲು ಯತ್ನಿಸುವುದೇ ಆಧ್ಯಾತ್ಮಿಕ ಸಾಧನೆ. ಸಾಧಾರಣ ಮನುಷ್ಯ ಕೂಡ ನಿಷ್ಕಾಮಕರ್ಮದಿಂದ ಇದನ್ನು ಸಾಧಿಸಬಹುದು. ಪ್ರತಿಯೊಬ್ಬ ವ್ಯಕ್ತಿಯೂ ಏನಾದರೊಂದು ಕೆಲಸವನ್ನು ಮಾಡಲೇಬೇಕು. ಆಲಸಿಯಾಗಿರುವುದಕ್ಕಿಂದ ಕೆಲಸ ಮಾಡುತ್ತಿರುವುದು ಒಳ್ಳೆಯದು. ಆದರೆ ಈ ಕೆಲಸದಿಂದ ತನಗೇನು ಲಾಭ ಸಿಗುತ್ತದೆ ಎಂಬ ಚಿಂತೆ ಮನಸ್ಸಿನಲ್ಲಿ ಏಳಬಾರದು. ಎಲ್ಲ ಕೆಲಸಗಳನ್ನೂ ಭಗವಂತನಿಗೆ ಅರ್ಪಿಸುವ ಅಭ್ಯಾಸ ಮಾಡಬೇಕು. ಇದನ್ನೇ 'ಯಜ್ಞ' ಎಂದು ಭಗವದ್ಗೀತೆಯು ಕರೆಯುತ್ತದೆ. ಯಜ್ಞವನ್ನು ದೇವತೆಗಳ ಪ್ರೀತಿಗಾಗಿ ಹಿಂದೆ ಮಾಡುತ್ತಿದ್ದರು. ಇದೇ ಭಾವವನ್ನು ನಮ್ಮ ಎಲ್ಲಾ ಕೆಲಸಗಳಲ್ಲೂ ತಂದುಕೊಳ್ಳಬೇಕು. ಅಂದರೆ ಇದರಿಂದ ತನಗೇನು ಸಿಗುತ್ತದೆ ಎಂಬ ಪ್ರತಿಫಲಾಪೇಕ್ಷೆಯನ್ನು ಬಿಟ್ಟು, ಕೇವಲ ಕೊಡುವ ಸ್ಥಾನದಲ್ಲಿ ಇದ್ದುಕೊಂಡು ನಾವು ಕಾರ್ಯ ಮಾಡಬೇಕು. ಸ್ವಾಮಿ ವಿವೇಕಾನಂದರು, "ಇವರಿಂದ ನನಗೇನಾದರೂ ಪ್ರತಿಫಲ ಸಿಗುತ್ತದೆ ಎಂಬ ಆಸೆಯನ್ನು ಇಟ್ಟುಕೊಂಡು ನೀವು ನಿಮ್ಮ ಮಕ್ಕಳನ್ನು ಬೆಳೆಸುವಿರಾ? ನಿಮ್ಮ ಕರ್ತವ್ಯವನ್ನು ನೀವು ಮಾಡುತ್ತಾ ಹೋಗಿ. ಅಲ್ಲಿಗೆ ಎಲ್ಲಾ ಮುಗಿಯಿತು. ಹೀಗೆ ನಿಮ್ಮ ಪ್ರತಿಯೊಂದು ಕೆಲಸವೂ ನಡೆಯಲಿ. ಮುಕ್ತಹಸ್ತದಿಂದ ನೀವು ಜಗತ್ತಿಗೆ ಕೊಡುತ್ತಾ ಹೋಗಿ. ಇದರಿಂದ ನನಗೇನು ಸಿಗುತ್ತದೆ ಎಂಬ ಒಂದು ಸಣ್ಣ ಆಲೋಚನೆಯೂ ನಿಮ್ಮ ಮನಸ್ಸಿನಲ್ಲಿ ಏಳದಿರಲಿ. ಹೀಗೆ ಮಾಡಿದರೆ ಮಾತ್ರ ನೀವು ಬಂಧನಕ್ಕೆ ಸಿಕ್ಕುವುದಿಲ್ಲ" ಎನ್ನುತ್ತಾರೆ. ಸ್ವಾಮಿ ಶಾರದಾನಂದರು, "ಈ ಭಾವದಲ್ಲಿ ನಾವು ನಿಸ್ವಾರ್ಥವಾಗಿ ಕೆಲಸಗಳನ್ನು ಮಾಡಲು ಸಾಧ್ಯವಾದರೆ ಜಪಧ್ಯಾನದ ಫಲವೇ ಸಿಗುತ್ತದೆ" ಎಂದು ಹೇಳುತ್ತಾರೆ. ಒಬ್ಬ ಸಾಧಾರಣ ಗೃಹಿಣಿ ತನ್ನ ಪತಿಯ ಸೇವೆಯನ್ನು ಮತ್ತು ಒಬ್ಬ ಮಾಂಸದ ಅಂಗಡಿಯನ್ನು ಇಟ್ಟುಕೊಂಡವನು ತನ್ನ ತಂದೆತಾಯಿಗಳ ಸೇವೆಯನ್ನು ನಿಷ್ಠೆ, ಶ್ರದ್ಧೆಗಳಿಂದ ಮಾಡುತ್ತಾ, ಒಬ್ಬ ಬ್ರಹ್ಮಚಾರಿಗೆ ಹೇಗೆ ಆದರ್ಶವಾದರು ಎಂಬ ಮಹಾಭಾರತದ ಕಥೆಯನ್ನು ಸ್ವಾಮಿ ವಿವೇಕಾನಂದರು ತಮ್ಮ ಕರ್ಮಯೋಗದ ಪ್ರವಚನಗಳಲ್ಲಿ ಉದಾಹರಿಸುತ್ತಾರೆ. "ಯಾವ ಕಾಮನೆಯೂ ಇಲ್ಲದೆ ವ್ಯಕ್ತಿ ಕೆಲಸಮಾಡಿದರೆ ಅಂಥ ಕೆಲಸದಿಂದ ಅವನಿಗೇ ಮಂಗಳವಾಗುತ್ತದೆ" ಎನ್ನುತ್ತಾರೆ ಶ್ರೀರಾಮಕೃಷ್ಣರು.


ಸ್ವಾಮಿ ವಿವೇಕಾನಂದರು, "ಗೀತೆಯ ಭಾವವೆಂದರೆ ಉತ್ಕಟ ಚಟುವಟಿಕೆಯ ನಡುವೆ ಉತ್ಕಟ ವಿಶ್ರಾಂತಿಯೇ ಆಗಿದೆ" ಎಂದು ಹೇಳುತ್ತಾರೆ. ಅವಿರತವಾದ ಕೆಲಸಗಳ ನಡುವೆ ನೀರವ ಶಾಂತಿಯೇ ಯೋಗಿಯ ಅಚಲವಾದ ಭಾವ. ಗೀತೆಯ ಉಪದೇಶವಾಗುವುದು ಅರಣ್ಯದಲ್ಲಿ ಅಲ್ಲ. ರಣಕ್ಷೇತ್ರದಲ್ಲಿರುವ ಒಬ್ಬ ಮಹಾಯೋಧನನ್ನು ಕುರಿತು ಸಂಪೂರ್ಣ ಗೀತೋಪದೇಶ ನಡೆಯುತ್ತದೆ. ಜೀವನದ ಕೋಲಾಹಲಗಳ ನಡುವೆಯೇ ಮನಸ್ಸನ್ನು ಸ್ಥಿರ ಹಾಗೂ ಶಾಂತಗೊಳಿಸಿ, ನಮ್ಮ ನಮ್ಮ ಕೆಲಸಗಳನ್ನು ಮಾಡಿಕೊಂಡು ಹೋಗಬೇಕು ಎಂಬ ಶಿಕ್ಷಣವನ್ನು ಗೀತೆ ನೀಡುತ್ತದೆ. ಸ್ವಾಮಿ ಶಾರದಾನಂದರು, "ಗೀತೆಯ ಸಂದೇಶವು ಕೇವಲ ಸಂನ್ಯಾಸಿಗಳಿಗೆ ಮಾತ್ರವಲ್ಲ, ಜೀವನದ ಪ್ರತಿಯೊಂದು ಕ್ಷೇತ್ರದಲ್ಲೂ ಇದನ್ನು ಕಾರ್ಯರೂಪಕ್ಕೆ ತರಬೇಕು. ಸಂನ್ಯಾಸಿ, ಗೃಹಸ್ಥ, ವಿದ್ಯಾರ್ಥಿಗಳು – ಹೀಗೆ ಪ್ರತಿಯೊಬ್ಬರೂ ಇಲ್ಲಿಯ ಉದಾರವಾದ ಭಾವನೆಗಳನ್ನು ಅಧ್ಯಯನ ಮಾಡಿ, ತಮ್ಮೆಲ್ಲಾ ಕೆಲಸಕಾರ್ಯಗಳ ನಡುವೆ ಸ್ಥಿತಪ್ರಜ್ಞ ಸ್ಥಿತಿಯಲ್ಲಿ ಇರುವುದನ್ನು ಅಭ್ಯಾಸ ಮಾಡಬೇಕು" ಎಂದು ಹೇಳುತ್ತಾರೆ.

ಭಗವದ್ಗೀತೆ ಜೀವನವಿಮುಖಿ ಧರ್ಮಗ್ರಂಥವಲ್ಲ. ಇದು ಜೀವನ್ಮುಖಿ. ನಾವು ನಮ್ಮ ಮನಸ್ಸಿನ ಸಮತೋಲನವನ್ನು ಕಾಪಾಡಿಕೊಂಡು, ಜೀವನವನ್ನು ಹೇಗೆ ಎದುರಿಸಬೇಕು ಎಂಬ ಪಾಠವನ್ನು ಭಗವದ್ಗೀತೆ ಕಲಿಸುತ್ತದೆ. ಇಂದಿನ ಕೌಟುಂಬಿಕ ಪರಿಸ್ಥಿತಿಯಲ್ಲಿ ಇದೇ ಮುಖ್ಯವಲ್ಲವೇ?

•

# ಶ್ರೀಮಾತೆಯವರು ಮತ್ತು ಆದರ್ಶ ದಾಂಪತ್ಯ

ಪ್ರವ್ರಾಜಿಕಾ ಧರ್ಮಪ್ರಾಣಾ



**ಆ**ಧ್ಯಾತ್ಮಿಕತೆಯ ಆಧಾರದ ಮೇಲೆ ಬಾಳು ನಡೆಸುವುದೇ ಜೀವನದ ಪರಮ ಆದರ್ಶ. ಸನಾತನ ಧರ್ಮದ ಮೂಲ ತತ್ತ್ವವು ಇದುವೇ ಆಗಿದೆ. ಈ ನವಯುಗದಲ್ಲಿ ಶ್ರೀರಾಮಕೃಷ್ಣರು ಮತ್ತು ಶ್ರೀಶಾರದಾದೇವಿಯವರು ಈ ಆದರ್ಶವನ್ನೇ ಪುನಃ ಜಗತ್ತಿಗೆ ತಿಳಿಸಲೆಂದು ಅವತರಿಸಿದರು. ಇವರು ಜನರಿಗೆ ಈ ಆದರ್ಶವನ್ನು ಉಪದೇಶಿಸಲೆಂದೇ ತಮ್ಮ ದಾಂಪತ್ಯ ಜೀವನವನ್ನು ನಡೆಸಿದರು. ಶ್ರೀರಾಮಕೃಷ್ಣರು ಸದಾ ಆಧ್ಯಾತ್ಮಿಕ ಜಗತ್ತಿನಲ್ಲೇ ವಿಹರಿಸಿ ಜನರಿಗೆ ಮಾರ್ಗದರ್ಶನವನ್ನು ನೀಡುತ್ತಿದ್ದರು. ಆದರೆ ಶ್ರೀಶಾರದಾದೇವಿಯವರು ಈ ಆದರ್ಶವನ್ನೇ ಸಾಧಾರಣ ಗೃಹಿಣಿಯಂತೆ ಬದುಕಿ ತೋರಿಸಿದರು. ಸಾವಿರಾರು ವರ್ಷಗಳಿಂದ ಆಚರಣೆಯಲ್ಲಿರುವ ಸನಾತನಧರ್ಮದ ಇತಿಹಾಸದಲ್ಲಿ ಮೂಡಿಬಂದಿರುವ ಶ್ರೇಷ್ಠಸತಿಯರಾದ ಸೀತಾ, ಸಾವಿತ್ರಿ, ಅನಸೂಯ ಇವರುಗಳ ಜೀವನವನ್ನೇ ಶ್ರೀಮಾತೆಯವರೂ ಅನುಸರಿಸಿದ್ದಾರೆ. ಆದರೂ ಈ ನವಯುಗದ ಆದರ್ಶವಾದ ಅವರ ಜೀವನ ಮತ್ತು ಉಪದೇಶಗಳು ಇನ್ನೂ ವೈಶಿಷ್ಟ್ಯಪೂರ್ಣವಾಗಿವೆ. ಅದಕ್ಕೆಂದೇ ಶ್ರೀಮಾತೆಯವರ ಬಗ್ಗೆ ಸೋದರಿ ನಿವೇದಿತಾ ಈ ರೀತಿ ಹೇಳುತ್ತಾರೆ: "She is the last of the old order and the first of the new order." – "ಶ್ರೀಮಾತೆಯವರು ಹಳೆಯ ವ್ಯವಸ್ಥೆಯ ಕಡೆಯ ಕೊಂಡಿಯಾಗಿದ್ದಾರೆ ಮತ್ತು ಹೊಸ ವ್ಯವಸ್ಥೆಯ ಮೊದಲನೆಯ ಕೊಂಡಿಯೂ ಆಗಿದ್ದಾರೆ."

**ಧೀರತೆ:** ದಾಂಪತ್ಯ ಜೀವನದಲ್ಲಿ ಸತಿಗೆ ಪತಿಯೇ ಆರಾಧ್ಯದೈವ. ಶ್ರೀಮಾತೆಯವರು ಈ ತತ್ತ್ವವನ್ನೇ ಅವಲಂಬಿಸಿದ್ದರು. ಚಿಕ್ಕ ವಯಸ್ಸಿನಲ್ಲೇ ವಿವಾಹವಾಗಿದ್ದರೂ ತವರುಮನೆಯಲ್ಲೇ ಬೆಳೆದರು. ಶ್ರೀರಾಮಕೃಷ್ಣರು ದಕ್ಷಿಣೇಶ್ವರದಿಂದ ಆಗಾಗ ಕಾಮಾರಪುಕುರಕ್ಕೆ ಬಂದು ತಮ್ಮ ಪತ್ನಿಯನ್ನು ಭೇಟಿಮಾಡಿ, ಸ್ನೇಹ ಪ್ರೀತಿಗಳನ್ನು ಹರಿಸುತ್ತಿದ್ದರೂ, ಪತ್ನಿ ಪ್ರಾಯದವಳಾದ ಮೇಲೆ ತಮ್ಮಲ್ಲಿಗೆ ಕರೆಸಿಕೊಳ್ಳುವ ವಿಚಾರವನ್ನು ಮಾಡಲೇ ಇಲ್ಲ. ಅಷ್ಟು ಮಾತ್ರವಲ್ಲ, ಭಗವದ್ಭಕ್ತಿಯ ಉನ್ಮಾದದಲ್ಲಿ ಮುಳುಗಿ, ಪತ್ನಿಯನ್ನು ಮರೆತೇ ಬಿಟ್ಟಿದ್ದರು. ಆ ಸಮಯದಲ್ಲಿ, ಹೊರ ಜಗತ್ತಿನ ಪರಿಚಯವೇ ಇಲ್ಲದೆ, ಹಳ್ಳಿಯ ಒಂದು ಮೂಲೆಯಲ್ಲಿ ಜೀವಿಸುತ್ತಿದ್ದ ಶಾರದಾದೇವಿಯವರು ಹದಿನಾಲ್ಕು ವರ್ಷದವರಿದ್ದಾಗ, ತಮ್ಮ ಆರಾಧ್ಯದೇವತೆಯಾದ ಪತಿಯ ಬಳಿಗೆ ಹೋಗಲು ತಾವಾಗಿ ನಿರ್ಧರಿಸಿದರು. ಅತಿ ದೂರದ ಕೊಲ್ಕತಾ ನಗರದ ಬಳಿಯಿದ್ದ ದಕ್ಷಿಣೇಶ್ವರವನ್ನು ತಲುಪುವ ಉಪಾಯವನ್ನು ತಾವೇ ಕಂಡುಹಿಡಿದುಕೊಂಡರು. ಆಗಿನ ಕಾಲದ ಹುಡುಗಿಯರಿಗೆ ಇದನ್ನು ಊಹಿಸಲೂ ಅಸಾಧ್ಯ. ಆದರೆ ಶ್ರೀಮಾತೆ ಧೀರರಾಗಿ ತಮ್ಮ ವೈವಾಹಿಕ ಜೀವನವನ್ನು ಸ್ವಂತ ಸಾಮರ್ಥ್ಯದಿಂದ ನಿರ್ಮಿಸಿಕೊಂಡರು.

**ಲಜ್ಜೆ:** ಕುಗ್ರಾಮದ ಕನ್ಯೆಯಾಗಿ ಬೆಳೆದು ಕೊಲ್ಕತಾ ನಗರಕ್ಕೆ ಬಂದು, ದಕ್ಷಿಣೇಶ್ವರದ ಕಾಳಿ ಮಂದಿರವನ್ನು ಶ್ರೀಮಾತೆಯವರು ತಲುಪಿದಾಗ ಅಲ್ಲಿ ವಾಸಿಸಲು ಯಾವ ಸೌಕರ್ಯವೂ ಇರಲಿಲ್ಲ. ಶ್ರೀರಾಮಕೃಷ್ಣರು ಏನೂ ಮಾಡಲಾರರು. ತಮ್ಮ ಕೊಠಡಿಯ ಹತ್ತಿರವಿರುವ, ಚಿಕ್ಕ ವಾದ್ಯಕೋಣೆಯಲ್ಲೇ ಅವರಿಗೆ ವಸತಿಯ ಏರ್ಪಾಡು ಮಾಡಿದರು. 'ಸ್ತ್ರೀಯರಿಗೆ ಲಜ್ಜೆಯೇ ಭೂಷಣ' ಎಂದು ಶ್ರೀರಾಮಕೃಷ್ಣರು ಆಗಾಗ ಹೇಳುತ್ತಿದ್ದರು. ಅಂತೆಯೇ ಜನಗಳಿಂದ ತುಂಬಿದ ಕಾಳಿಮಂದಿರದಲ್ಲಿ, ಅಲ್ಲಿಯ ಒಬ್ಬ

ಶ್ರೀಮಾತೆ ಶಾರದಾದೇವಿಯವರು ತಮ್ಮ ಪತಿದೇವರೊಡನೆ ನಡೆಸಿದ ದಾಂಪತ್ಯಜೀವನ ಇಡೀ ಮಾನವಜನಾಂಗಕ್ಕೆ ಆದರ್ಶಪ್ರಾಯವಾದುದು. ಈ ಸಂದರ್ಭದಲ್ಲಿ ಅವರು ವ್ಯಕ್ತಪಡಿಸಿದ ಉದಾತ್ತ ಗುಣಗಳು ಅನುಕರಣೀಯವಾದುವು. ಅವುಗಳನ್ನು ಮನೋಜ್ಞವಾಗಿ ತಿಳಿಸಿಕೊಟ್ಟಿರುವ ಪೂಜ್ಯ ಮಾತಾಜಿಯವರು ಅರುಣಾಚಲ ಪ್ರದೇಶದ ಖೋನ್ಸಾ ಎಂಬಲ್ಲಿನ ರಾಮಕೃಷ್ಣ ಶಾರದಾ ಮಿಷನ್ ಕೇಂದ್ರದಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ. ಇವರು ಹಲವಾರು ಲೇಖನಗಳು ಈ ಪತ್ರಿಕೆಯಲ್ಲಿ ಈಗಾಗಲೇ ಪ್ರಕಟವಾಗಿವೆ.

ಕೆಲಸಗಾರನಿಗೆ ಕೂಡ ಗೊತ್ತಾಗದಂತೆ, ಕಾಣದಂತೆ ಶ್ರೀಮಾತೆಯವರು ಹಲವಾರು ವರ್ಷಗಳ ಕಾಲ ವಾಸಿಸುತ್ತಿದ್ದರು. ಹೀಗೆ ಅವರು ತಮ್ಮ ಪವಿತ್ರತೆಯನ್ನು, ಲಜ್ಜೆಯನ್ನು ಕಾಪಾಡಿಕೊಂಡು ಜೀವಿಸಿದ್ದು ನಿಜಕ್ಕೂ ಅದ್ಭುತವಾದ ಸಂಗತಿ.

**ಸಹನೆ:** ಹಳ್ಳಿಯ ಜೀವನವೇ ತಮಗೆ ಅಭ್ಯಾಸವಾಗಿದ್ದರೂ ಕಾಲಕ್ಕೆ ತಕ್ಕಂತೆ, ಸ್ಥಳಕ್ಕೆ ಸರಿಯಾಗಿ ಹೊಂದಿಕೊಂಡು ಜೀವಿಸಲು ಶ್ರೀಮಾತೆಯವರಿಗೆ ಕಷ್ಟವೇನೂ ಆಗಲಿಲ್ಲ. ಹೀಗಾಗಿ ನಿತ್ಯ ದಿನಚರಿಯ ಆವಶ್ಯಕತೆಗಳಿಗೂ ಅಸೌಕರ್ಯ ವಾಗಿದ್ದರೂ ಅವರು ದಕ್ಷಿಣೇಶ್ವರದಲ್ಲಿಯೇ ವಾಸಿಸತೊಡಗಿದರು. ಅವರ ಉದ್ದೇಶ ಒಂದೇ – ಪತಿಯ ಸೇವೆಯಲ್ಲಿ ತೊಡಗುವುದು ಮತ್ತು ಅವರ ಮನಸ್ಸನ್ನರಿತು ಅವರ ಕಾರ್ಯಗಳಿಗೆ ಸಹಕರಿಸುವುದು. ಶ್ರೀರಾಮಕೃಷ್ಣರು ಒಂದು ದಿನ ಪತ್ನಿಗೆ ಕೇಳಿದರು, "ನೀನು ನನ್ನನ್ನು ಪ್ರಾಪಂಚಿಕ ಜೀವನಕ್ಕೆ ಇಳಿಸಲು ಬಂದಿರುವೆಯಾ?" ಕಾಮಕಾಂಚನತ್ಯಾಗಿಯಾದ ಪತಿಯ ಮನೋಭಾವವನ್ನು ಅರಿತ ಶ್ರೀಮಾತೆ ಒಡನೆಯೇ ಉತ್ತರಿಸಿದರು, "ನಾನೇಕೆ ನಿಮ್ಮನ್ನು ಸಂಸಾರಕ್ಕೆ ಇಳಿಸಲಿ? ನಿಮ್ಮಿಷ್ಟದ ಮಾರ್ಗದಲ್ಲಿ ಸಹಕರಿಸಲೆಂದೇ ನಾನು ಬಂದಿದ್ದೇನೆ" ಎಂದು. ಪತಿಯ ಸೇವೆಗಾಗಿ ತನ್ನ ಸ್ವಂತ ಸುಖ ಸೌಕರ್ಯಗಳನ್ನೂ ಕಡೆಗಣಿಸಿ, ಪತಿಯ ಆಧ್ಯಾತ್ಮಿಕ ಕಾರ್ಯಕ್ಕೆ ಸಹಕರಿಸುತ್ತಾ, ಹದಿಮೂರು ವರ್ಷಗಳ ಕಾಲ ದಕ್ಷಿಣೇಶ್ವರದಲ್ಲಿ ಜಪ ಧ್ಯಾನ ಸಾಧನೆಗಳನ್ನು ಮಾಡುತ್ತಾ ಶ್ರೀಮಾತೆ ಎಲೆಯ ಮರೆಯ ಹೂವಿನಂತೆ ಬಾಳಿದರು,.

**ಶ್ರದ್ಧೆ:** ಪತಿಯು ತನಗಾಗಿ ಏನನ್ನೂ ಮಾಡುತ್ತಿಲ್ಲವೆಂದು ಶ್ರೀಮಾತೆಯು ಯಾವತ್ತೂ ಆಕ್ಷೇಪಿಸಲಿಲ್ಲ. ಅದು ಮಾತ್ರವಲ್ಲ, ಅವರನ್ನು ಕಂಡರೆ ಅದೆಷ್ಟು ಶ್ರದ್ಧೆ, ಭಕ್ತಿ! ಶ್ರೀಮಾತೆ ಆಗಾಗ ಕಾಮಾರಪುಕುರ, ಜಯರಾಂಬಾಟಿಗಳಿಗೆ ಹೋಗಿಬರುತ್ತಿದ್ದರು. ಒಂದು ಸಲ ಅದೇನೋ ಕಾರಣಕ್ಕೆ ಊರಿಗೆ ಹೋಗಿ, ಮರಳಿ ದಕ್ಷಿಣೇಶ್ವರಕ್ಕೆ ಬಂದರು. ಬಂದ ದಿನ ಒಳ್ಳೆಯದಾಗಿರಲಿಲ್ಲ. ಶ್ರೀರಾಮಕೃಷ್ಣರು ಪುನಃ ಊರಿಗೆ ಮರಳಿ, ಒಳ್ಳೆಯ ದಿನ ನೋಡಿ ಮತ್ತೆ ಬರಲು ಅವರಿಗೆ ಹೇಳಿದರು. ಶ್ರೀಮಾತೆಯವರು ಪತಿಯ ಮಾತಿಗೆ ವಿರೋಧವನ್ನು ಹೇಳದೆ, ಅದೆಷ್ಟು ಮೈಲಿಗಳು ನಡೆದು ಬಂದಿದ್ದರೋ, ಮೌನವಾಗಿ ಅಷ್ಟೂ ದೂರ ಪುನಃ ನಡೆದು ತಿರುಗಿ ಹೊರಟುಹೋದರು.

**ಸ್ನೇಹ, ವಾತ್ಸಲ್ಯ:** ಆಧ್ಯಾತ್ಮಿಕ ಜೀವನದಲ್ಲಿ ಮಾರ್ಗದರ್ಶನವನ್ನು ಪಡೆಯಲು ಶ್ರೀರಾಮಕೃಷ್ಣರ ಬಳಿ ಬರುವ ಜನರ ಸಂಖ್ಯೆ ಹೆಚ್ಚಾಗುತ್ತಿದ್ದಂತೆ, ಶ್ರೀಮಾತೆಗೆ ಪತಿಯ ಬಳಿ ಹೋಗಿ ಮಾತನಾಡಲೂ ಅವಕಾಶ ಸಿಗುತ್ತಿರಲಿಲ್ಲ. ಒಂದೆರಡು ದಿನಗಳಲ್ಲ, ಕೆಲವು ತಿಂಗಳುಗಳ ಕಾಲ ಅವರು ತಮ್ಮ ಪತಿಯನ್ನು ನೋಡಲೂ ಸಾಧ್ಯವಾಗುತ್ತಿರಲಿಲ್ಲ. ಆದರೆ ಅವರ ನಡುವಣ ಸ್ನೇಹ ಪ್ರೀತಿಗೆ ಇದು ಬಾಧಕವಾಗಿರಲಿಲ್ಲ. ಪತಿಯು ತಮಗಾಗಿ ಮಾತ್ರವಲ್ಲ, ಎಲ್ಲರಿಗಾಗಿಯೂ ಎಂದು ತಿಳಿದುಕೊಂಡು, ಅವರ ಕೊಠಡಿಯಿಂದ ಅಲ್ಪದೂರದಲ್ಲಿರುವ ವಾದ್ಯಕೊಠಡಿಯಿಂದಲೇ ಪತಿಯ ದರ್ಶನವನ್ನು ಪಡೆದುಕೊಂಡು ತೃಪ್ತರಾಗುತ್ತಿದ್ದರು. ಬಹಳ ಲಜ್ಜೆ, ಸಂಕೋಚದ ಸ್ವಭಾವದವರಾಗಿದ್ದರೂ ತಮ್ಮ ವಿಶಾಲ ಹೃದಯ ಮನಸ್ಸುಗಳಿಂದ, ಪತಿಯ ಬಳಿ ಬರುತ್ತಿದ್ದ ಭಕ್ತರನ್ನು ಸ್ನೇಹ ವಾತ್ಸಲ್ಯದಿಂದ ಕಾಣುತ್ತಿದ್ದರು. ನಗರದಿಂದ ಬರುತ್ತಿರುವ ಶ್ರೀಮಂತ, ವಿದ್ಯಾವಂತ ಮಹಿಳೆಯರನ್ನು ತಮ್ಮ ಚಿಕ್ಕ ಕೋಣೆಯಲ್ಲೇ ಸತ್ಕರಿಸುತ್ತಿದ್ದರು. ಹಲವಾರು ಸಾಧಕ ಮಹಿಳೆಯರಂತೂ ಅವರ ಜೊತೆಯಲ್ಲಿಯೇ ವಾಸಿಸತೊಡಗಿದರು.

**ನಮ್ರತೆ:** ಪತ್ನಿಯ ಸುಖಸೌಕರ್ಯಗಳಿಗಾಗಿ ತಾವು ಹೆಚ್ಚೇನೂ ಮಾಡಲಾಗದಿದ್ದರೂ, ಶ್ರೀರಾಮಕೃಷ್ಣರು ಪತ್ನಿಯನ್ನು ಅತ್ಯಂತ ಗೌರವಿಸುತ್ತಿದ್ದರು. ತಮ್ಮ ಇಷ್ಟದೇವತೆಯಾದ ಕಾಳೀಮಾತೆಯನ್ನೇ ಅವರಲ್ಲಿ ಕಾಣುತ್ತಿದ್ದರು. ಶ್ರೀಮಾತೆಯನ್ನು ಅವರು ಎಂದೂ 'ನೀನು' ಎಂದು ಸಂಬೋಧಿಸಲಿಲ್ಲ. ಪತ್ನಿಗೆ ಬೇಕಾದ ಸ್ವಾತಂತ್ರ್ಯವನ್ನೂ ನೀಡಿದ್ದರು. ಪತಿಯಿಂದ ಪಡೆದ ಸ್ನೇಹ, ಗೌರವ, ಸ್ವಾತಂತ್ರ್ಯಗಳನ್ನು ದುರುಪಯೋಗಗೊಳಿಸದೆ, ಅತಿಯಾದ ನಮ್ರತೆಯಿಂದಲೇ ಶ್ರೀಮಾತೆ ಅವುಗಳನ್ನು ಸ್ವೀಕರಿಸಿದ್ದರು. ಪತಿಯ ಇಚ್ಛೆಯ ವಿರೋಧವಾಗಿ ಎಂದೂ ನಡೆಯುತ್ತಿರಲಿಲ್ಲ. ಒಬ್ಬ ಭಕ್ತ ಶ್ರೀರಾಮಕೃಷ್ಣರಿಗೆ ಧನಸಹಾಯವನ್ನು ಮಾಡಲು ಹೋದಾಗ, ಕಾಮಕಾಂಚನತ್ಯಾಗಿಯಾದ ಅವರು ಅದನ್ನು ಸ್ವೀಕರಿಸಲಿಲ್ಲ. ಅವನನ್ನು ಪತ್ನಿಯ ಬಳಿಗೆ ಕಳುಹಿಸಿದರು. ಅವನು ಅದೆಷ್ಟು ಒತ್ತಾಯಿಸಿದರೂ, ಭಕ್ತರ ಉಪಚಾರಗಳಿಗೆ ಹಣದ ಆವಶ್ಯಕತೆಯಿದ್ದರೂ, ಪತಿಯ ತ್ಯಾಗಜೀವನಕ್ಕೆ ಬಾಧಕವಾಗಬಾರದೆಂದು ಶ್ರೀಮಾತೆ ಆ ಧನವನ್ನು ನಿರಾಕರಿಸಿದರು. ಪಾನಿಹಾಟಿ ಎಂಬ ಸ್ಥಳದಲ್ಲಿ ಸಂಕೀರ್ತನೆಯಲ್ಲಿ ಪಾಲ್ಗೊಳ್ಳಲು ಭಕ್ತರೊಂದಿಗೆ ಶ್ರೀರಾಮಕೃಷ್ಣರು ಹೊರಟಾಗ, ಸ್ತ್ರೀಭಕ್ತರೊಂದಿಗೆ ಹೋಗಲು ಶ್ರೀಮಾತೆಗೂ ಇಚ್ಛೆಯಾಯಿತು. ಭಕ್ತಳೊಬ್ಬಳ ಮೂಲಕ ಪತಿಯನ್ನು ಕೇಳಿದಾಗ ಶ್ರೀರಾಮಕೃಷ್ಣರು, "ಅವಳಿಗೆ ಇಚ್ಛೆ ಇದ್ದರೆ ಬರಲಿ" ಎಂದು ಉತ್ತರವಿತ್ತರು. ಈ ಉತ್ತರದಲ್ಲೇ ಇದಕ್ಕೆ ಪತಿಯ ಸಮ್ಮತಿ ಇಲ್ಲ ಎಂದು ಅರಿತುಕೊಂಡು ಹೋಗಬೇಕೆಂದು ಇದ್ದ ತಮ್ಮ ಇಚ್ಛೆಯನ್ನು ಶ್ರೀಮಾತೆ ಬಿಟ್ಟುಬಿಟ್ಟರು.